# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103, ☎ : 0816-2255650, 2273511ಫ್ಯಾಕ್ಸ್ : 0816-2270719

ಸಂಖ್ಯೆ:ತು.ವಿ.: ಪ.ವಿ.:ವಿ.ಶಿ.-07/2023-24/379 ದಿನಾಂಕ:04.08.2023

CBCS

## ಸುತ್ತೋಲೆ

ವಿಷಯ: 2023 ರ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಯ (ಸಿ.ಬಿ.ಸಿ.ಎಸ್) I, III & V ನೇ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಛಾಯಾ ಪ್ರತಿ / ಮರುಮೌಲ್ಯಮಾಪನ / ಛಾಲೆಂಜ್ ಮೌಲ್ಯಮಾಪನದ ಮಾಹಿತಿ ಕುರಿತು.

.....

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023 ರ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಯ (ಸಿ.ಬಿ.ಸಿ.ಎಸ್) I, III & V ನೇ ಸೆಮಿಸ್ಟರ್‌ನ ಬಿ.ಎ/ ಬಿ.ಎಸ್ಸಿ/ ಬಿ.ಕಾಂ/ ಬಿ.ಸಿ.ಎ/ ಬಿ.ಎಸ್.ಡಬ್ಲ್ಯು/ ಬಿ.ವೋಕ್ ಮತ್ತು ಬಿ.ಬಿ.ಎಂ, ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ (5, 7 & 9 ನೇ ಸೆಮಿಸ್ಟರ್) & ಬಿ.ವಿ. ಎ (3, 5 & 7 ನೇ ಸೆಮಿಸ್ಟರ್) ಪರೀಕ್ಷೆಗಳ ಫಲಿತಾಂಶವನ್ನು ಈಗಾಗಲೇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ತಡೆಹಿಡಿಯಲಾಗಿರುವ ಅಥವಾ ಫಲಿತಾಂಶ ಪ್ರಕಟವಾಗದಿರುವ ಕುರಿತು ವಿದ್ಯಾರ್ಥಿಗಳು ಸೂಕ್ತ ಮಾಹಿತಿಗಳನ್ನು ಪ್ರಾಂಶುಪಾಲರ ಮೂಲಕ ಈ ಕಚೇರಿಗೆ ಒದಗಿಸಿ, ಒಂದು ವಾರದೊಳಗಾಗಿ ಫಲಿತಾಂಶವನ್ನು ಪಡೆದುಕೊಳ್ಳತಕ್ಕದ್ದು.

| | | |
|---|---|---|
| 1. | ವಿದ್ಯಾರ್ಥಿಗಳು ಛಾಯಾ ಪ್ರತಿಗಾಗಿ ಕಾಲೇಜಿನಲ್ಲಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 09.08.2023 |
| 2. | ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ (ಛಾಯಾ ಪ್ರತಿ) | 10.08.2023 |
| 3. | ವಿಶ್ವವಿದ್ಯಾನಿಲಯಕ್ಕೆ ವಿವರಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ಛಾಯಾ ಪ್ರತಿ) | 11.08.2023 |
| 4. | ಪರೀಕ್ಷಾ ವಿಭಾಗದಿಂದ ಕಾಲೇಜಿನವರು ಜೆರಾಕ್ಸ್ (ಛಾಯಾ ಪ್ರತಿ) ಪ್ರತಿಯನ್ನು ಪಡೆಯುವ ದಿನಾಂಕ | 18.08.2023 (ಬೆಳಗ್ಗೆ 11:00 ಗಂಟೆಯ ನಂತರ) |
| 5. | ವಿದ್ಯಾರ್ಥಿಗಳು ಮರುಮೌಲ್ಯಮಾಪನ/ ಛಾಲೆಂಜ್ ಮೌಲ್ಯಮಾಪನಕ್ಕೆ ಕಾಲೇಜಿನಲ್ಲಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 21.08.2023 |
| 6. | ಮರುಮೌಲ್ಯಮಾಪನ/ಛಾಲೆಂಜ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳ ವಿವರಗಳನ್ನು ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕಡೆಯ ದಿನಾಂಕ | 22.08.2023 |
| 7. | ಮರುಮೌಲ್ಯಮಾಪನ/ಛಾಲೆಂಜ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳ ವಿವರಗಳನ್ನು ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕಡೆಯ ದಿನಾಂಕ | 23.08.2023 |

ಶೇಕಡಾ 15ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಚಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿಸಲ್ಲಿಸತಕ್ಕದ್ದು. ಆದಾಗ್ಯೂ ಶೇಕಡಾ 15 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ. ಪ್ರಾಂಶುಪಾಲರು ಅರ್ಜಿಗಳನ್ನು ಪರಿಶೀಲಿಸಿ, ಆನ್‌ಲೈನ್‌ನಲ್ಲಿ ನಮೂದಿಸುವುದು.

****

ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ನಿಗದಿತ ಶುಲ್ಕ ಪಾವತಿಸಿ, ಉತ್ತರ ಪತ್ರಿಕೆಯ ಛಾಯಾಪ್ರತಿಯನ್ನು ಪಡೆದು ಸಂಬಂಧಿಸಿದ ಅಧ್ಯಾಪಕರಿಂದ ಮೌಲ್ಯಮಾಪನ ಮಾಡಿಸಿ ನೀಡಿರುವ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳು ನಿಗದಿತ ಮರುಮೌಲ್ಯಮಾಪನ ಶುಲ್ಕದೊಂದಿಗೆ ಕಡ್ಡಾಯವಾಗಿ ಒಂದು ವಿಷಯಕ್ಕೆ ರೂ.500-00 (ರೂಪಾಯಿ ಐದು ನೂರು ಮಾತ್ರ) ಗಳ ಹೆಚ್ಚುವರಿ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸುವುದು.

(....2)

ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣದಿಂದಲೂ ಪರಿಗಣಿಸಲಾಗುವುದಿಲ್ಲ.

ಛಾಯಾಪ್ರತಿ, ಮರುಮೌಲ್ಯಮಾಪನ ಮತ್ತು ಛಾಲೆಂಜ್ ಮೌಲ್ಯಮಾಪನ ಶುಲ್ಕವನ್ನು ತಮ್ಮ ಕಾಲೇಜಿನಲ್ಲಿಯೇ ಪಾವತಿಸಿಕೊಂಡು, RTGS / NEFT **ಮೂಲಕ ವಿಶ್ವವಿದ್ಯಾನಿಲಯದ ಎಸ್.ಬಿ.ಐ. ಖಾತೆ ಸಂ. 36954908103 ಗೆ ನಿಗದಿಪಡಿಸಿದ ದಿನಾಂಕದೊಳಗೆ ಪಾವತಿಸಿ,** ಸೂಕ್ತ ವಿವರಗಳೊಂದಿಗೆ **ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರಿಗೆ ಸಲ್ಲಿಸುವುದು. ಛಾಯಾಪ್ರತಿ, ಮರುಮೌಲ್ಯಮಾಪನ ಮತ್ತು ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ವಿವರಗಳನ್ನು ದ್ವಿ-ಪ್ರತಿಯಲ್ಲಿ ಸಲ್ಲಿಸಲು ಕೋರಲಾಗಿದೆ.

ಶುಲ್ಕಗಳ ವಿವರ:

| | | | | |
|---|---|---|---|---|
| 1. | Xerox copy for one subject with Application Fee | : | Rs. | 210-00 |
| 2. | Revaluation for one subject with Application Fee | : | Rs. | 260-00 |
| 3. | Challenge Valuation Fee (Rs.210+260+500) | : | Rs. | 970-00 |

5/8/23
ಕುಲಸಚಿವರು (ಪರೀಕ್ಷಾಂಗ)

ಗೆ,
ಪ್ರಾಂಶುಪಾಲರು, ಘಟಕ ಕಾಲೇಜುಗಳು / ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- ಇಂದೇ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು
2. ವಿಭಾಗದ ಮೇಲ್ವಿಚಾರಕರು, ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.- ಇಂದೇ ಪ್ರಾಂಶುಪಾಲರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು.
3. ಕಛೇರಿ ಪ್ರತಿ